ವಚನವೇ ಸತ್ಯ ವಚನವೇ ಧರ್ಮ ವಚನವೇ ನಿತ್ಯ

# ವಚನ ಜ್ಯೋತಿ ಬಳಗ

ವಚನ ಸಂಸ್ಕೃತಿ ಅಧ್ಯಯನ ಪ್ರಸರಣ ಕೇಂದ್ರ

23ನೇ ವರ್ಷದ ಸಂಭ್ರಮದಲ್ಲಿ





## ಮಕ್ಕಳ ವಚನ ಮೇಳ - ೨೦೨೦







ಜನವರಿ

**9,10, ಮತ್ತು 11, 2020**

ಬೆಳಗ್ಗೆ 8.00 ರಿಂದ

ಸ್ಥಳ : **ಕಲಾಗ್ರಾಮ**

ಮಲ್ಲತ್ತಹಳ್ಳಿ ಬಸ್ ನಿಲ್ದಾಣದ ಹಿಂಭಾಗ,
(ಡಾ. ಅಂಬೇಡ್ಕರ್ ಇಂಜಿನಿಯರಿಂಗ್
ಕಾಲೇಜ್ ಸಮೀಪ),
ಜ್ಞಾನಭಾರತಿ ಆವರಣ, ಬೆಂಗಳೂರು.

**ಮಕ್ಕಳಲ್ಲಿನ ಕ್ರಿಯಾಶೀಲತೆಯ ಬೆಳವಣಿಗೆಗಾಗಿ**

ವಚನ ಗಾಯನ, ವಚನ ವಿವೇಚನ, ವಚನ ಪ್ರಬಂಧ, ವಚನ ಅಂತ್ಯಾಕ್ಷರಿ,
ವಚನ ನೃತ್ಯ, ವಚನ ರಸಪ್ರಶ್ನೆ, ಸಮೂಹ ವಚನ ಗಾಯನ, ವಚನ ಚಿತ್ರ,
ವಚನ ರೂಪಕ, ವಚನ ಕಂಠಪಾಠ, ವಚನ ಕಥೆ, ವಚನ ವೇಷಭೂಷಣ,

**ಅಂಗನವಾಡಿಯಿಂದ ಹತ್ತನೇ ತರಗತಿಯವರೆಗೆ**

ಬನ್ನಿ ಭಾಗವಹಿಸಿ, ವಚನ ಚಳವಳಿಯ ಸಂಭ್ರಮದಲ್ಲಿ ಪಾಲ್ಗೊಳ್ಳಿ

## ವಿಭಾಗಗಳು

1) ಎಳೆಯರು : ಶಿಶುವಿಹಾರ, (ಅಂಗನವಾಡಿ, ಬೇಬಿ ಸೆಂಟರ್, ಎಲ್.ಕೆ.ಜಿ. ಯು.ಕೆ.ಜಿ. ಮಕ್ಕಳು)

2) ಕಿರಿಯರು : 1 ಮತ್ತು 2ನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು

3) ಪೂರ್ವ ಪ್ರಾಥಮಿಕರು : 3 ಮತ್ತು 4ನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು

4) ಪ್ರಾಥಮಿಕರು : 5, 6 ಮತ್ತು 7ನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು

5) ಪ್ರೌಢರು : 8, 9 ಮತ್ತು 10ನೇ ತರಗತಿಗಳಲ್ಲಿ ಓದುತ್ತಿರುವ ಮಕ್ಕಳು





# ವಚನ ಗಾಯನ

**12ನೆಯ ಶತಮಾನದ ವಚನಕಾರರ ಒಂದು ವಚನವನ್ನು ಸುಮಧುರವಾಗಿ ತಪ್ಪಿಲ್ಲದಂತೆ ಹಾಡುವುದು.**


ಬಸವಣ್ಣ ಮಾತ್ರವಲ್ಲದೆ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಒಕ್ಕಲಿಗ ಮುದ್ದಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಮಾದಾರ ಚನ್ನಯ್ಯ . . ಹೀಗೆ ಯಾವುದೇ ವಚನಕಾರರ ಪೈಕಿ ಒಬ್ಬರ ಒಂದು ವಚನವನ್ನು ಸುಮಧುರವಾಗಿ ಹಾಡುವುದು.

(ನೆನಪಿಡಿ. 12ನೆಯ ಶತಮಾನದ ವಚನಕಾರರ ಒಂದು ವಚನವನ್ನು ಮಾತ್ರ ಹಾಡಬೇಕು.) (ಎಲ್ಲಾ ವಿಭಾಗಗಳ ಮಕ್ಕಳು ಭಾಗವಹಿಸಬಹುದು)








ಸ್ಪರ್ಧೆ – 2

# ವಚನ ವಿವೇಚನ

12ನೆಯ ಶತಮಾನದ ವಚನಕಾರರ ಒಂದು ವಚನವನ್ನು ಆಯ್ದುಕೊಂಡು ಮಾತನಾಡುವುದು. ನೇರವಾಗಿ ವಿಷಯ ಪ್ರವೇಶಿಸಿ ವಚನಕಾರ/ವಚನಕಾರ್ತಿಯರ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡು ವಚನವನ್ನು ವ್ಯಾಖ್ಯಾನಿಸಬೇಕು (ಗರಿಷ್ಠ 5 ನಿಮಿಷ)

**(ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗ : 5 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು)**





# ವಚನ ಪ್ರಬಂಧ

1) ವಿದ್ಯಾರ್ಥಿಗಳು ಒಂದು ಗಂಟೆಯ ಅವಧಿಯಲ್ಲಿ ಅಂದವಾಗಿ ತಪ್ಪಿಲ್ಲದಂತೆ ಸಾಧ್ಯವಾದಷ್ಟು ಹೆಚ್ಚು ವಚನಗಳನ್ನು ಬರೆಯಬೇಕು.
**ಕಿರಿಯರು, ಪೂರ್ವ ಪ್ರಾಥಮಿಕರು ಮತ್ತು ಪ್ರಾಥಮಿಕರಿಗೆ : (1ರಿಂದ 7ನೇ ತರಗತಿ ವಿದ್ಯಾರ್ಥಿಗಳು)**

2) **ಪ್ರೌಢಶಾಲಾ ವಿದ್ಯಾರ್ಥಿಗಳು** : ತಾವು ಇಷ್ಟಪಟ್ಟ ವಚನಕಾರರ ಕುರಿತಾಗಿ ಪ್ರಬಂಧವನ್ನು ಬರೆಯುವುದು. ಬಸವಣ್ಣ, ಅಲ್ಲಮಪ್ರಭು, ಆಯ್ದಕ್ಕಿ ಲಕ್ಕಮ್ಮ, ಮಹಾದೇವಿಯಕ್ಕ, ಸಿದ್ಧರಾಮ, ಜೇಡರ ದಾಸಿಮಯ್ಯ, ಮೇದಾರ ಕೇತಯ್ಯ, ಡೋಹಾರ ಕಕ್ಕಯ್ಯ, ಸತ್ಯಕ್ಕ, ಮೋಳಿಗೆ ಮಹದೇವಿ . . . ಹೀಗೆ ಯಾರಾದರೊಬ್ಬ ವಚನಕಾರರನ್ನು ಆಯ್ಕೆಮಾಡಿಕೊಂಡು ಅವರ ವ್ಯಕ್ತಿಚಿತ್ರ, ವಚನಗಳು ಹಾಗೂ ವ್ಯಕ್ತಿತ್ವವನ್ನು ಕುರಿತು ಬರೆಯುವುದು. **(ಬರೆಯಲು ಹಾಳೆಗಳನ್ನು ನೀಡಲಾಗುತ್ತದೆ. ಪ್ಯಾಡನ್ನು ವಿದ್ಯಾರ್ಥಿಗಳು ತರುವುದು)**





## ಸ್ಪರ್ಧೆ – 4

# ವಚನ ಅಂತ್ಯಾಕ್ಷರಿ

12ನೇ ಶತಮಾನದ ವಚನಗಳನ್ನು ಅಂತ್ಯಾಕ್ಷರಿ ಕ್ರಮದಲ್ಲಿ ಹೇಳುವುದು. ಇದು ತಂಡ ಸ್ಪರ್ಧೆಯಾಗಿದ್ದು, ಒಂದು ಶಾಲೆಯಿಂದ ಗರಿಷ್ಠ ಮೂರು ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.

**ಪ್ರೌಢ ಶಾಲಾ ವಿಭಾಗ (8,9 ಮತ್ತು 10ನೇ ತರಗತಿ ವಿದ್ಯಾರ್ಥಿಗಳು)**













**ಸ್ಪರ್ಧೆ – 5**

# ವಚನ ನೃತ್ಯ

ವಚನಗಳನ್ನು ಆಧರಿಸಿ ನೃತ್ಯವನ್ನು ಸಂಯೋಜಿಸಿ ಪ್ರದರ್ಶಿಸುವುದು. ವೈಯುಕ್ತಿಕವಾಗಿಯಾದರೂ ಅಥವಾ ತಂಡವಾಗಿಯೂ ಭಾಗವಹಿಸಬಹುದು. ವಚನಗಳ ಆಯ್ಕೆಯಲ್ಲಿ ವೈವಿಧ್ಯತೆ ಇರಲಿ.

**(ಎಲ್ಲಾ ವಿಭಾಗಗಳು : ಅಂಗನವಾಡಿಯಿಂದ 10ನೇ ತರಗತಿ ವಿದ್ಯಾರ್ಥಿಗಳು)**















# ವಚನ ರಸಪ್ರಶ್ನೆ

ವಚನ ರಸಪ್ರಶ್ನೆಯು ಕ್ವಿಜ್ ಸ್ವರೂಪವನ್ನು ಹೊಂದಿರುತ್ತದೆ. ಇದು ಇಬ್ಬರು ಸದಸ್ಯರ ತಂಡ ಸ್ಪರ್ಧೆ. ವಚನಕಾರರು, ಅವರ ಅಂಕಿತಗಳು, ಅವರ ವಿಚಾರಗಳು, ಅವರ ಕ್ಷೇತ್ರವ್ಯಾಪ್ತಿ, ನಂತರದ ವಚನಕಾರರು, ಹರಿಹರಾದಿ ಕವಿಗಳು, ಅನುಭಾವಿಗಳು, ತತ್ತ್ವಪದಕಾರರು ಮೊದಲಾದ ಕವಿಗಳ + ಅನುಭಾವಿಗಳ ವಿಚಾರದೊಂದಿಗೆ ಕನ್ನಡ ನಾಡು + ನುಡಿ + ಇತಿಹಾಸಗಳನ್ನು ಕುರಿತಾದ ರಸಪ್ರಶ್ನೆಗಳನ್ನು ಒಳಗೊಂಡಿರುವ ಬಹು ಆಕರ್ಷಣೀಯ ಸ್ವರೂಪದ ವಿಶಿಷ್ಟ ಸ್ಪರ್ಧೆಯಾಗಿದೆ. ಬಳಗವು ಮಾದರಿ ರಸಪ್ರಶ್ನೆಗಳನ್ನು ಒದಗಿಸುತ್ತದೆ.

**(ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗ : 5 ರಿಂದ 7, ಹಾಗೂ 8 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು)**






**ಸ್ಪರ್ಧೆ – 7**

# ಸಮೂಹ ವಚನ ಗಾಯನ

12ನೇ ಶತಮಾನದ ವಚನಕಾರರ ವಚನಗಳನ್ನು ಹಾಡುವುದು. ಇದು ತಂಡ ಸ್ಪರ್ಧೆಯಾಗಿದ್ದು, ಗರಿಷ್ಠ ಸಂಖ್ಯೆಯ ಮಿತಿಯಿಲ್ಲ.

**(ಎಲ್ಲಾ ವಿಭಾಗಗಳು : ಅಂಗನವಾಡಿಯಿಂದ 10ನೇ ತರಗತಿ ವಿದ್ಯಾರ್ಥಿಗಳು, ಒಂದು ತಂಡವು ಒಂದು ವಚನವನ್ನು ಮಾತ್ರ ಹಾಡುವುದು)**













## ಸ್ಪರ್ಧೆ – 8

# ವಚನ ಚಿತ್ರ

ಅ) **ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗ :** ವಚನಕಾರರ ವ್ಯಕ್ತಿಚಿತ್ರ, ವಚನಸಾಹಿತ್ಯ ಹಾಗೂ ವಚನಕಾರರ ಬದುಕಿನ ಚಿತ್ರಣ – ಇವುಗಳಲ್ಲಿ ಯಾವುದಾದರು ಒಂದನ್ನು ಕುರಿತು ಚಿತ್ರ ಬಿಡಿಸುವುದು.


ಆ) **ಎಳೆಯರು, ಕಿರಿಯರು ಮತ್ತು ಪೂರ್ವ ಪ್ರಾಥಮಿಕ ವಿಭಾಗ :** ವಚನಕಾರರ ಮುದ್ರಿತ ಚಿತ್ರಕ್ಕೆ ಸೂಕ್ತವಾದ ಬಣ್ಣಗಳನ್ನು ಹಚ್ಚುವುದು.

**ನೆನಪಿಡಿ :** ಒಂದು ಗಂಟೆಯ ಅವಧಿ, ಅಗತ್ಯ ಸಲಕರಣೆಗಳನ್ನು ಹಾಗೂ ಪ್ಯಾಡನ್ನು ತಾವೇ ತರಬೇಕು, ಕಾಗದವನ್ನು ಒದಗಿಸಲಾಗುತ್ತದೆ.

















ಸ್ಪರ್ಧೆ – 9

# ವಚನ ರೂಪಕ

ವಚನ ರೂಪಕವೆಂದರೆ ವಚನ ಚಳವಳಿಯ, ವಚನಕಾರರ ಕುರಿತಾದ ಕಿರು ನಾಟಕಗಳು ಅಥವಾ ರೂಪಕಗಳನ್ನು ಅಭಿನಯಿಸುವುದು. ಇದು ತಂಡ ಸ್ಪರ್ಧೆಯಾಗಿದೆ.

**ಪ್ರಾಥಮಿಕ, ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಬಹುದು**













# ವಚನ ಕಂಠಪಾಠ

ವಚನ ಕಂಠಪಾಠ ಎಂದರೆ 12ನೇ ಶತಮಾನದ ವಚನಗಳನ್ನು ತಪ್ಪಿಲ್ಲದೇ ಸಂಖ್ಯೆಯ ಮಿತಿಯಿಲ್ಲದೇ ಹೇಳುವುದು. ಒಂದು ವಾಕ್ಯ ತಪ್ಪಾದರೂ ಅವರ ಕಂಠಪಾಠ ಸ್ಪರ್ಧೆ ಕೊನೆಯಾಗುತ್ತದೆ. **ಸೂಚನೆ:** ತಾವು ಕಂಠಪಾಠ ಮಾಡಿದ ಪಠ್ಯವನ್ನು ತೀರ್ಪುಗಾರರ ಬಳಿ ಕೊಡುವುದು.

**ಪೂರ್ವ ಪ್ರಾಥಮಿಕರು, ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸಬಹುದು**





# ವಚನ ಕಥೆ

ವಚನ ಕಥೆ ಎಂದರೆ ವಚನ ಚಳವಳಿಯ, ವಚನಕಾರರ ಕುರಿತಾಗಿ ಕಥಾರೂಪದಲ್ಲಿ ಪ್ರಸ್ತುತಿ ಕೊಡುವುದು. (ಗರಿಷ್ಠ 5 ನಿಮಿಷಗಳು)


**(ಎಲ್ಲಾ ವಿಭಾಗಗಳು : ಅಂಗನವಾಡಿಯಿಂದ 10ನೇ ತರಗತಿ ವಿದ್ಯಾರ್ಥಿಗಳು)**












# ವಚನ ವೇಷಭೂಷಣ

ತಮ್ಮ ಇಷ್ಟದ ವಚನಕಾರ / ವಚನಕಾರ್ತಿಯ ವೇಷವನ್ನು ಧರಿಸಿ ಅವರ ಪ್ರಸಿದ್ಧ ಅಥವಾ ಹೇಳಿಕೆಯನ್ನು ಹೇಳುತ್ತ ಹಾವಭಾವದೊಂದಿಗೆ ಹೆಜ್ಜೆ ಹಾಕುವ ಸ್ಪರ್ಧೆ.

**(ಎಲ್ಲಾ ವಿಭಾಗಗಳು : ಅಂಗನವಾಡಿಯಿಂದ 10ನೇ ತರಗತಿ ವಿದ್ಯಾರ್ಥಿಗಳು)**








# ಸ್ಪರ್ಧೆಗಳ ವೇಳಾಪಟ್ಟಿ

ವಿದ್ಯಾರ್ಥಿಗಳು ಶಾಲೆಯಿಂದ ಅಥವಾ ವೈಯಕ್ತಿಕವಾಗಿಯೂ (ತಮ್ಮ ಪೋಷಕರೊಂದಿಗೆ) ವಚನ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಭಾಗವಹಿಸುವ ಪ್ರತಿಯೋರ್ವ ಸ್ಪರ್ಧಿಗೂ ಪ್ರಮಾಣ ಪತ್ರ ನೀಡಲಾಗುವುದು. ಪ್ರತಿ ಸ್ಪರ್ಧೆಗೂ ಐದು ಬಹುಮಾನಗಳಿರುತ್ತವೆ. ಅತ್ಯುತ್ತಮ ಪ್ರತಿಭೆ ತೋರಿದ ಶಾಲಾ ತಂಡಕ್ಕೆ ಲಿಂಗೈಕ್ಯ ಎಸ್.ಎಚ್. ಗೀರ್ವಾಣಮ್ಮನವರ ಸಂಸ್ಮರಣಾರ್ಥ ಪ್ರತಿಷ್ಠಾಪಿಸಿರುವ "ಹೊನ್ನಗೀರ್ವಾಣ ಪುರಸ್ಕಾರ"ವನ್ನು ನೀಡಲಾಗುವುದು. ಒಬ್ಬ ವಿದ್ಯಾರ್ಥಿ ಎಷ್ಟು ಸ್ಪರ್ಧೆಗಳಲ್ಲಿ ಬೇಕಾದರೂ ಭಾಗವಹಿಸಬಹುದು. ಒಂದು ಸ್ಪರ್ಧೆಗೆ ಹತ್ತು ರೂಪಾಯಿಯ ಪ್ರವೇಶಧನವಿರುತ್ತದೆ. ಪಾಲ್ಗೊಳ್ಳಬಯಸುವ ವಿದ್ಯಾರ್ಥಿಗಳು ದಯಮಾಡಿ **ಡಿಸೆಂಬರ್ 30ರೊಳಗೆ** ತಮ್ಮ ಹೆಸರುಗಳನ್ನು ವಚನಜ್ಯೋತಿ ಕಾರ್ಯಾಲಯದಲ್ಲಿ / ನಮ್ಮ ಈ-ಮೇಲ್‌ನಲ್ಲಿ / ವೈಯಕ್ತಿಕವಾಗಿ ಅಥವಾ ಶಾಲೆ/ ಕಾಲೇಜಿನ ಮೂಲಕ ನೋಂದಾಯಿಸುವುದು.

| ದಿನಾಂಕ **9-01-2020** ಗುರುವಾರ | ದಿನಾಂಕ **10-01-2020** ಶುಕ್ರವಾರ | ದಿನಾಂಕ **11-01-2020** ಶನಿವಾರ |
|---|---|---|
| ಬೆಳಗ್ಗೆ 7.30 ಗಂಟೆಯಿಂದ **ನೋಂದಣಿ** | ಬೆಳಗ್ಗೆ 8.00 ಗಂಟೆಗೆ ವಚನ ನೃತ್ಯ | ಬೆಳಗ್ಗೆ 8.00 ಗಂಟೆಗೆ ವಚನ ವೇಷಭೂಷಣ |
| 8.30 ಗಂಟೆಗೆ **ಉದ್ಘಾಟನೆ** | 9.00 ಗಂಟೆಗೆ ವಚನ ರಸಪ್ರಶ್ನೆ | 9.00 ಗಂಟೆಗೆ ವಚನ ಕಂಠಪಾಠ |
| 9.00 ಗಂಟೆಗೆ ವಚನ ಗಾಯನ | 9.00 ಗಂಟೆಗೆ ಸಮೂಹ ವಚನ ಗಾಯನ | 11.00 ಗಂಟೆಗೆ ವಚನ ಕಥೆ |
| 9.00 ಗಂಟೆಗೆ ವಚನ ವಿವೇಚನ | 11.30 ಗಂಟೆಗೆ ವಚನ ಚಿತ್ರ | ಸಂಜೆ 3.00 ಗಂಟೆಗೆ **ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣೆ** |
| 11.00 ಗಂಟೆಗೆ ವಚನ ಪ್ರಬಂಧ | ಮಧ್ಯಾಹ್ನ1.00 ಗಂಟೆಗೆ ವಚನ ರೂಪಕ | |
| ಮಧ್ಯಾಹ್ನ 1.00 ಗಂಟೆಗೆ ವಚನ ಅಂತ್ಯಾಕ್ಷರಿ | | |

ಮಕ್ಕಳ ವಚನ ಮೇಳದ ಸ್ಪರ್ಧೆಗಳನ್ನು ಕಲಾಗ್ರಾಮದ ಸುಂದರ ಪರಿಸರದಲ್ಲಿ ಹಲವು ವೇದಿಕೆಗಳನ್ನು ನಿರ್ಮಿಸಿ ನಡೆಸಲಾಗುವುದು. ವಚನವೆಂದರೆ ಅದು ಮನೋನಂದನ. ಉಲ್ಲಾಸ, ಉತ್ಸಾಹ, ಸಂಭ್ರಮಗಳಿಂದ ಮಕ್ಕಳು ನಲಿದಾಡುವ, ವಚನ ಸಂಸ್ಕೃತಿಯನ್ನು ಅರಿತುಕೊಳ್ಳುವ ಉತ್ಸವವವೇ ಮಕ್ಕಳ ವಚನಮೇಳ